ರೀತಿಯ ಕಾಯಿಲೆ ಕಷ್ಟ ನೋಡಿಕೊಂಡು ಶುಶ್ರೂಷೆ ಮಾಡಿಕೊಂಡು ಬಂದಿರುವ ಮಂಜುನಾಥನ ಮನೆಯಿಂದ ಮುದುಕಿಯನ್ನು ಬಲವಂತವಾಗಿ ಹೊತ್ತು ತಂದಿರುವುದು ಸರಿಯಲ್ಲ. ಅದು ಬದುಕಿರುವವರೆಗೂ ಎಂದಿನಂತೆ ಕಿರಿಮಗನ ಮನೆಯಲ್ಲೇ ಇರುವುದು ಕ್ಷೇಮ ಎಂದು ತೀರ್ಮಾನವಾಯಿತು. ಮತ್ತೆ ಆಟೋದಲ್ಲಿ ಕುಳಿತ ಮುದುಕಿ ದೇವರಬನದ ಮಗನ ಮನೆ ತಲುಪಿಕೊಂಡಿತು.

ಸುದ್ದಿ ಲಾಯರ್ ಪರಮೇಶಿಗೆ ತಲಪಿತು.'ಇಂತಹಾ ಕೇಸನ್ನು ಸುಲಭಕ್ಕೆ ಬಿಟ್ಟುಕೊಟ್ಟು ಕೈಚೆಲ್ಲಿ ಕೂರಲಾದೀತೇ? ಬೆಲೆಬಾಳುವ ಆ ಹಡ್ಲು ಮಂಜುನಾಥನಿಗೇ ಎಂದು ಛಾಪಾಕಾಗದದಲ್ಲಿ ಬರೆದು ರಿಜಿಸ್ಟರ್ ಮಾಡಿಸಿಲ್ಲವಲ್ಲ. ನೀನು ಈಗಲೇ ಒಂದು ನಾಲ್ಕು ಜನರನ್ನು ಕರೆದುಕೊಂಡು ಊರಿಗೆ ಹೋಗು. ನಾಳೆಯ ಹೊತ್ತಿಗೆ ಹೇಗಾದರೂ ಮಾಡಿ ಮುದುಕಿಯನ್ನು ನಿಮ್ಮ ಮನೆಗೆ ಸಾಗಿಸು. ಅಷ್ಟರಲ್ಲಿ ನಾನು ಬಂದು ಎಲ್ಲಾ ನೋಡಿಕೊಳ್ಳುತ್ತೇನೆ' ಎಂದು ಚಾಂಡಿಯ ಮಗನಿಗೆ ತಾಕೀತು ಮಾಡಿ ಕಳಿಸಿಕೊಟ್ಟಿದ್ದ.

* * *

ತಳ್ಳಾಟ, ನೂಕಾಟ, ಕೋಲಾಹಲದ ನಡುವೆಯೇ ಅಡ್ಡೆ ಹೊತ್ತಿದ್ದವರು ಕೆರೆ ಏರಿಯ ಬಳಿ ತಲಪಿಯೇಬಿಟ್ಟರು. ಆ ಕಡೆ ಊರ ಕಡೆಯಿಂದ, ಅಂಗಡಿ ಬೀದಿಯಿಂದ ಸುದ್ದಿ ತಿಳಿದ ಜನ ಕೌತುಕದಿಂದ ಬಂದು ಜಮಾಯಿಸಿಬಿಟ್ಟಿದ್ದರು. ಇಕ್ಕಟ್ಟಾದ ಆ ಕೆರೆ ಏರಿ ರಸ್ತೆಯಲ್ಲಿ ಜನಸಂದಣಿಯನ್ನು ಸೀಳಿಕೊಂಡು ಅಡ್ಡೆ ಹೊತ್ತು ಮುಂದೆ ಹೋಗುವಂತಿರಲಿಲ್ಲ. ಸೇರಿದ್ದ ಆ ಗುಂಪಿನಲ್ಲಿ ಪಂಚಾಯತಿ ಅಧ್ಯಕ್ಷರೂ ಇದ್ದರು. ಅವರು ಮುಂದೆ ಬಂದು 'ಆ ಸಾಯ ಮುದ್ಕಿಯ ಯಾಕೆ ಹಂಗೆ ಗೋಳಾಡುಸ್ತೀರಾ...ಅಡ್ಡೆ ಒಂದ್ಕಡೆ ಇಳ್ಸಿ....ನೀವೂ ಸುಧಾರಿಸ್ಕಳಿ...ಆ ಮುದ್ಕಿನೂ ಸ್ವಲ್ಪ ಉಸಿರು ಹುಯ್ಕೊಳ್ಳಲಿ...... ಯಾರಾದ್ರೂ ಹೋಗಿ ಒಂದ್ ಆಟೋ ಮಾಡ್ಕಂಡು ಆ ಹಂಚಿನಮನೆ ಮುದ್ಕ ಕುಂಜೇಗೌಡ್ರನ್ನ ಕರ್ಕಂಡ್ ಬನ್ನಿ' ಎಂದರು. ಅಡ್ಡೆ ಹೊತ್ತಿದ್ದ ಚಾಂಡಿ ಮಗ ಹಾಗೂ ಅವನ ನಗರದ ಗೆಳೆಯರು ವಿಧಿಯಿಲ್ಲದೆ ಅಲ್ಲೇ ಅಡ್ಡೆ ಇಳಿಸಿ ಬುಸುಗುಡುತ್ತಾ ನಿಂತುಕೊಂಡರು.

ಹಂಚಿನಮನೆ ಬಡ್ಡೆಯ ಹಿರಿಯ ತಲೆ, ನಡೆಯಲಾರದ ಮುದುಕ ಕುಂಜೇಗೌಡರನ್ನು ಆಟೋದಿಂದ ಇಳಿಸಿ ಗುಂಪಿನ ನಡುವೆ ದಾರಿ ಮಾಡಿಕೊಂಡು, ಕೈ ಹಿಡಿದು ಕರೆತಂದರು.

'ಕುಂಜೇಗೌಡ್ರು ಬಂದ್ರು. ಈಗ ಏನ್ಮಾಡದು ಅಂತ ಅವರೇ ಹೇಳ್ತಾರೆ' ಎಂದು ನೆರೆದಿದ್ದ ಜನ ಪರಸ್ಪರ ಹೇಳಿಕೊಂಡರು.

ಚಾಂಡಿಯ ಮಗನಿಗೆ ಯಾಕೋ ಪರಿಸ್ಥಿತಿ ಕೈಮೀರಿ ಹೋಗುತ್ತಿದೆ ಎನಿಸಿತು. ಈಗ ಸಡಿಲ ಬಿಟ್ಟರೆ ಲಾಯರ್ ಪರಮೇಶಿ ಸುಮ್ಮನಿರಲಾರ ಎಂಬುದು ಅರಿವಾಯಿತು.

'ಬನ್ರೋ, ಹೊತ್ಗಳ್ರೋ ಅಡ್ಡೆಯಾ... ಈ ಮುದುಕ ಏನು ಜಡ್ಜಾ ತೀರ್ಮಾನ ಕೊಡದಿಕ್ಕೆ' ಎಂದು ತನ್ನ ಗೆಳೆಯರಿಗೆ ಹೇಳುತ್ತಾ ನುಗ್ಗಿ ಬಂದ.

'ತಡೀರ್ರೋ, ತಡೀರ್ರೋ...ಆ ಸಾಯ ಮುದ್ಕಿಯ ಯಾಕೆ ಹಂಗೆ ಗೋಳಾಡುಸ್ತೀರಿ' ಎನ್ನುತ್ತಾ ಕುಂಜೇಗೌಡರು ಕೈ ಅಡ್ಡ ಹಿಡಿದರು.

ಅದನ್ನು ಗಣನೆಗೇ ತೆಗೆದುಕೊಳ್ಳದೆ ಚಾಂಡಿಯ ಮಗ ಹಾಗೂ ಅವನ ಗೆಳೆಯರು ನುಗ್ಗಿಬಂದ ರಭಸಕ್ಕೆ ಕುಂಜೇಗೌಡರು ಹಿಂದಕ್ಕೆ ತಳ್ಳಿ, ಕುಕ್ಕರಿಸಿಕೊಳ್ಳುತ್ತಾ 'ಈ ಮುಂಡೆಮಕ್ಳು ಯಾರ ಮಾತ ಕೇಳಂಗವ್ರೆ' ಎಂದು ಗೊಣಗಾಡಿಕೊಂಡರು.

ಅಡ್ಡೆಯನ್ನು ಹೊತ್ತುಕೊಳ್ಳುವ ಹಾಗೂ ಅದನ್ನು ವಿರೋಧಿಸುವವರ ನಡುವೆ ಕೈಕೈ ಮಿಲಾಯಿಸಿತು. ಆ ನೂಕಾಟದಲ್ಲಿ ಅಡ್ಡೆ ಎಡಕ್ಕೆ ಜಾರಿ ಮುದುಕಿಯ ಪಾಲಿನ ಹಡ್ಲಿಗೆ ಜರುಗಿ ಕುಳಿತಿತು.

'ಈ ಸೂಳೆಮಕ್ಳು, ಮುಂಡೇರು ಎಲ್ಲಾ ಸೇರಿ ಸಾಯ ಮುದ್ಕಿಯ ಸಮಾ ಪಾಲು ಹಾಕಂಡು ಹೋಗಿಬುಡ್ಲಿ ಅತ್ಲಾಗಿ...ಈ ಮುಂಡೆಮಕ್ಕಿಗೆಲ್ಲಾ ಯಾರ್ ಬುದ್ಧಿ ಹೇಳ್ತಾರೆ' ಎಂದು ಹತಾಶರಾದ ಕುಂಜೇಗೌಡರು ತಮ್ಮಷ್ಟಕ್ಕೇ ತಾವು ಹೇಳಿಕೊಂಡರು.

ಅಂಗಡಿ ಬೀದಿಯ ಕಡೆಯಿಂದ ಲಾಯರ್ ಪರಮೇಶಿ ಹಾಗೂ ದೇವರಬನದ ಕಡೆಯಿಂದ ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ಗುಂಪು ಸೀಳಿಕೊಂಡು ಅಡ್ಡೆಯ ಕಡೆ ಬರತೊಡಗಿದರು.

ಅಲ್ಲಿ ಏನು ನಡೆಯುತ್ತಿದೆ ಎಂದು ತಿಳಿಯದೆ ಗಾಬರಿಯಾಗಿದ್ದ ಮುದುಕಿ ಬೊಚ್ಚುಬಾಯಿ ಬಿಡುತ್ತಾ ಪಿಳಿ ಪಿಳಿ ನೋಡುತಿತ್ತು.

●